# ಉದ್ಯೋಗ ಪರ್ವ

## ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ

## ಅಭಿನಂದನ ಗ್ರಂಥ



ಸಂಪಾದಕರು

- ಡಾ. ಎಸ್. ಟಿ. ಮೇರವಾಡೆ
- ಡಾ. ಆರ್. ವಿ. ಪಾಟೀಲ

೩೭. ದಾಸಸಾಹಿತ್ಯದಲ್ಲಿ ಷಟ್ಪದಿ ೫೨೮
**• ಡಾ. ರೋಹಿಣಿ ಎನ್. ಹಿರೇಶೆಡ್ಡಿ**

೩೮. ಡಾ. ವೀರಣ್ಣ ರಾಜೂರ ಅವರ ಅಪ್ರಕಟಿತ ನಾಟಕಗಳು ೫೩೫
**• ಶ್ರೀನಿವಾಸ ದೊಡ್ಡಮನಿ**

೩೯. ಸಂಪ್ರದಾಯ-ಶರಣರ ಪ್ರತಿಕ್ರಿಯೆ ೫೪೫
**• ಡಾ. ವಿಜಯಶ್ರೀ ಸಬರದ**

೪೦. ಬಸವಣ್ಣನವರ ಜನ್ಮ ಮತ್ತು ಬಾಲ್ಯದ ಪರಿಸರ ೫೫೩
**• ಅವಿನಾಶ ಜಿ. ಕಮ್ಮಾರ**

೪೧. ಬಸವರಾಜ ಕಟ್ಟಿಮನಿಯವರ ಕಥೆಗಳ ಅವಲೋಕನ ೫೬೧
**• ಪ್ರೊ. ಎಂ. ಎಸ್. ಮಾಗಣಗೇರಿ**

೪೨. ಸಂಸ್ಕೃತ ಶ್ಲೋಕಾರ್ಥ ೫೭೨
**• ಪ್ರೊ. ಜಿ. ಆರ್. ಅಂಬಲಿ**

**ಭಾಗ-೬ ಫೋಟೋ ಪರ್ವ**

೧. ವಂಶಾವಳಿ ೫೮೩
೨. ಲೇಖಕರ ವಿಳಾಸ ೫೮೫
೩. ಫೋಟೋ ಗ್ಯಾಲರಿ ೫೮೯

■■

# ಬಸವರಾಜ ಕಟ್ಟೀಮನಿಯವರ ಕಥೆಗಳ ಅವಲೋಕನ

● ಪ್ರೊ. ಎಂ. ಎಸ್. ಮಾಗಣಗೇರಿ

"ಒಂದು ಕೃತಿ ರಚನೆಯ ಹಿಂದೆ ಕವಿಯ ಒಟ್ಟು ವ್ಯಕ್ತಿತ್ವ ತೊಡಗಿಕೊಂಡಿದ್ದು, ಅದು ಸೃಜನಶೀಲ ಕ್ರಿಯೆಯನ್ನು ರೂಪಿಸುವಂಥಾದ್ದು. ಆದ್ದರಿಂದ ಅದು ಒಂದು ಕೃತಿಯ ಕಲಾತ್ಮಕತೆಯನ್ನು ಸಂಕೀರ್ಣತೆಯನ್ನು ಗುರುತಿಸುವಾಗ, ವ್ಯಕ್ತಿತ್ವ ಹಾಗೂ ಅನುಭವದ ಸ್ತರಗಳನ್ನು ಅನುಭವಿಸುವುದು ಅಗತ್ಯ." ಒಬ್ಬ ಸಾಹಿತಿಯ ಕೃತಿಗಳನ್ನು ಬೆಲೆಕಟ್ಟುವಾಗ ಆ ಕೃತಿಗಳ ನಿರ್ಮಾಣಕ್ಕೆ ಪ್ರೇರಣೆ, ಕಾಲ, ಪರಿಸರ, ಹಿನ್ನೆಲೆ, ಹಾಗೂ ಸಮಕಾಲೀನ ಸಾಹಿತ್ಯ ಸ್ಥಿತಿಯ ಪರಿಜ್ಞಾನ ಅವಶ್ಯಕವೆನಿಸುತ್ತದೆ.

**ಜನನ :.** ಬಸವರಾಜ ಕಟ್ಟೀಮನಿಯವರು ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮಲಾಮರಡಿ ಎಂಬ ಪುಟ್ಟ ಹಳ್ಳಿಯಲ್ಲಿ ೧೯೧೯ರ ಅಕ್ಟೋಬರ್ ೫ರಂದು ಜನಿಸಿದರು. ತಂದೆ ಅಪ್ಪಣ್ಣ, ತಾಯಿ ಬಾಳವ್ವ, ಈ ಈರ್ವರು ದಂಪತಿಗಳಿಗೆ ಎರಡನೆಯ ಮಗನಾಗಿ ಬಸವರಾಜ ಪ್ರಪಂಚಕ್ಕೆ ಕಾಲಿಸಿರಿಸಿದ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಶಿರೂರು ಕಟ್ಟೀಮನಿಯವರ ತಂದೆಯ ಊರಾದರೆ, ಇಲ್ಲಿಂದ ಐದು ಮೈಲು ದೂರದಲ್ಲಿರುವ ಮಲಾಮರಡಿ ತಾಯಿಯ ಊರು. ತಂದೆ-ತಾಯಿಗಳಿಬ್ಬರೂ ನಿರಕ್ಷರಕುಕ್ಷಿಗಳು. ಈ ನಿರಕ್ಷತೆಯ ಕಾರಣದಿಂದಾಗಿಯೇ ಅಪ್ಪಣ್ಣ ತನಗೆ ಸೇರಬೇಕಿದ್ದ ಪಿತ್ರಾರ್ಜಿತ ಆಸ್ತಿಯಾದ ಎಂಟು ಎಕರೆ ಜಮೀನನ್ನು ಕಳೆದುಕೊಂಡು ಅಲೆಮಾರಿಯಾಗಿ ಜೀವಿಸಬೇಕಾಯಿತು.

ಬಸವರಾಜ ಕಟ್ಟೀಮನಿಯವರ ಮೇಲೆ ತಂದೆಗಿಂತ ತಾಯಿಯ ಪ್ರಭಾವವೇ ಅಧಿಕವಾಗಿತ್ತು. ನ್ಯಾಯ ನಿಷ್ಠುರತೆ, ಅನ್ಯಾಯದ ವಿರುದ್ಧ ಹೋರಾಟ, ಕಷ್ಟ ಸಹಿಷ್ಣುತೆಗಳನ್ನು ಬಸವರಾಜ ತನ್ನ ತಾಯಿಯಿಂದ ಬಳುವಳಿಯಾಗಿ ಪಡೆದ ಗುಣಗಳಾಗಿದ್ದವು. ತಾಯಿಯಲ್ಲಿದ್ದ ಛಲ, ಎದೆಗಾರಿಕೆ, ಆಕೆಯ ಬಾಯಿಯಿಂದ ಕೇಳಿದ ವೀರರ ಕಥೆಗಳು, ಪ್ರಸಂಗಗಳು ಬಾಲಕ ಬಸವಣ್ಣನ ಮೇಲೆ ಗಾಢವಾದ ಪ್ರಭಾವ ಬೀರಿದ್ದವು. "ತಮ್ಮಂತೆ ಮಕ್ಕಳು ನಿರಕ್ಷರಿಗಳಾಗಿ ಕಷ್ಟಕೋಟಲೆಗಳನ್ನು ಅನುಭವಿಸುವುದು ಬೇಡ ಎಂದು ತಾಯ್ತಂದೆಯರು ಕಡುಬಡತನದಲ್ಲೇ ಮಗನನ್ನು

ಶ್ರೀ ನಾಗೇಶ ಬಾಬುರಾವ್ ಶೆಟ್ಟಿಯವರು ಸುಸಂಸ್ಕೃತ ಕುಟುಂಬದಿಂದ ಬಂದವರು, ದೂರದೃಷ್ಟಿಯುಳ್ಳವರು. ದಿ. ಬಾಬುರಾವ್ ಅಂತಪ್ಪ ಶೆಟ್ಟಿ ಹಾಗೂ ಮಾತೋಶ್ರೀ ಲಲಿತಮ್ಮನವರ ಜೇಷ್ಠ ಸುಪುತ್ರರಾದ ಇವರು ಶರಣ ಸಂಸ್ಕೃತಿ, ಸಂಸ್ಕಾರದೊಂದಿಗೆ ಬೆಳೆದವರು. ಇವರಿಗೆ ಸಹನೆ, ಪ್ರೀತಿ, ವಿಶ್ವಾಸ, ನಂಬಿಕೆ, ವಿನಯವಂತಿಕೆ, ಸ್ನೇಹಪರತೆ ಆಚಾರ-ವಿಚಾರಗಳು ಸಹಜವಾಗಿಯೇ ಮೈಗೂಡಿಕೊಂಡು ಬಂದಿವೆ. 'ಕಾಯಕವೇ ಕೈಲಾಸ'ವೆಂಬ ಶರಣರ ಮಹಾಮಾರ್ಗದಲ್ಲಿ ಜೀವನ ರೂಪಿಸಿಕೊಂಡು ಶ್ರಮ ಸಂಸ್ಕೃತಿಗೆ ಮಾದರಿಯಾಗಿದ್ದಾರೆ. ಮೃದು ಹೃದಯಿ, ಮೃದು ಮಾತು, ಕ್ರಿಯಾ ಶೀಲತೆ, ಪಾದರಸದ ಚುರುಕುತನ, ಅಚ್ಚುಕಟ್ಟುತನ, ಉತ್ಸಾಹ, ಕಾರ್ಯದಕ್ಷತೆ, ಶಿಸ್ತು, ನಿರ್ಮಲವಾದ ಭಾವ, ಸದಾ ಪ್ರಸನ್ನ ಚಿತ್ತರು. ಆದರ್ಶನೀಯ ಮಾತು, ಆದರಾತಿತ್ಯದಿಂದ ಶರಣರ ಕಾಯಕ-ದಾಸೋಹವನ್ನು ಪ್ರಯೋಗಾತ್ಮಕ ಗೊಳಿಸಿದವರು. ಹಾಗಾಗಿ ಶ್ರೀ ನಾಗೇಶ ಶೆಟ್ಟಿಯವರೆಂದರೆ ಎಲ್ಲರಿಗೂ ಅಚ್ಚು ಮೆಚ್ಚು, ಮನೆಯ ಒಳಗೂ-ಹೊರಗೂ, ಬಂಧು-ಬಾಂಧವರಿಗೂ, ಸ್ನೇಹಿತರಿಗೂ ಇವರು ಕಲ್ಲು ಸಕ್ಕರೆಯಂತವರು.

ಮೈಸೂರ ರೆಸ್ಟೋರೆಂಟ್ ಉದ್ಯಮದೊಂದಿಗೆ ಜನಾನುರಾಗಿಯಾದವರು. ಕೆಲಸದವರು ಮತ್ತು ಮಾಲಕರು ಎಂಬ ಮೇಲುಕೀಳು ಭಾವವಿಲ್ಲದೆ ಎಲ್ಲರನ್ನು ಸಮಭಾವದಿಂದ ನೋಡಿಕೊಂಡು ಹೋಟೆಲ ಉದ್ಯಮ ನಡೆಸುತ್ತಿರುವರು. ಇವರ ಗುಣ-ನಡತೆ ಮೌಲ್ಯಯುತ ಬದುಕಿಗೆ ಸಾಕಾರ ರೂಪವಾಗಿ ಈ 'ಅಭಿನಂದನ' ಗ್ರಂಥ ರೂಪ ಪಡೆದುಕೊಂಡಿರುವುದು. ಇದೊಂದು ದಾಖಲಾರ್ಹ ಗ್ರಂಥವಾಗಿದೆ ಎಂದು ಹೇಳಬಹುದು.

◆ ಸಂಪಾದಕರು

ಸೌಮ್ಯ ಪ್ರಕಾಶನ
ವಿಜಯಪುರ

ISBN 978-93-83813-20-9